(ಇ) ಬಂದಿದೆ.

(ಈ) ಹೌದು.

(ಉ) ಹೂಳೆತ್ತುವ ಕಾಮಗಾರಿಗೆ ರೂ. 0.32 ಲಕ್ಷ ಕೆರೆ ಸುಧಾರಣೆಗೆ 4.04 ಲಕ್ಷ ರೂ. ಗಳನ್ನು ವಿನಿಯೋಗಿಸಲಾಗಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಗಡ್ಡದೇವರಮಠ ಗಡ್ಡಯ್ಯ ಶಿವಮೂರ್ತಯ್ಯ ಇವರು ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 419ಕ್ಕೆ ಉತ್ತರಾರ್ಥ

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ನೀರಾವರಿ ಕ್ಷೇತ್ರ (ಹೆಕ್ಟೇರುಗಳಲ್ಲಿ)	2006-07 ರ ವರೆಗಿನವೆಚ್ಚ	ಷರಾ
1	ಲಕ್ಷ್ಮೇಶ್ವರ ಹತ್ತಿರ ಇಂಗು ಕೆರೆ ನಿರ್ಮಾಣ	34.10	45	15.06	ಕಾಮಗಾರಿ ಪ್ರಗತಿಯಲ್ಲಿದೆ
2	ಸೂರಣಗಿ ಹತ್ತಿರ ಬ್ಯಾರೇಜ್ ನಿರ್ಮಾಣ	80.00	45	69.70	ಕಾಮಗಾರಿ ಪ್ರಗತಿಯಲ್ಲಿದೆ
3	ಮಾಗಡಿಕೆರೆ ಸುಧಾರಣೆ	29.96	30	0.40	ಹೂಳೆತ್ತುವ ಕಾಮಗಾರಿ ಪೂರ್ಣಗೊಂಡಿದ್ದು, ಏರಿಯ ದುರಸ್ತಿ ಕೆಲಸ ಪ್ರಗತಿಯಲ್ಲಿದೆ
4	ಸಿದ್ಧಾಪುರ ಕೆರೆ ಸುಧಾರಣೆ	29.99	40	4.04	ಏರಿ ಸುಧಾರಣೆ ಕೆಲಸ ಪೂರ್ಣಗೊಂಡಿದ್ದು, ಸುಮಾರು 874 ಘ.ಮೀ.ಹೂಳು ತೆಗೆಯಲಾಗಿದ್ದು, ಕಾಮಗಾರಿಯು ಸ್ಥಗಿತಗೊಂಡಿರುವುದು
5	ಮುಚ್ಚೂರ ಕೆರೆ ಸುಧಾರಣೆ	30.00	50	16.43	ಕಾಲುವೆ ಲೈನಿಂಗ್ ಕೆಲಸ ಪ್ರಗತಿಯಲ್ಲಿದೆ.
	ಒಟ್ಟು	204.05	210	105.63	

ಅಫಜಲ್ ಪುರ ನಗರದಲ್ಲಿ ಇರುವ ಇನಾಮಿ ಜಮೀನು.

658. ಶ್ರೀ ಪಾಟೀಲ್ ಎಂ.ವೈ (ಅಫಜಲ್‌ಪುರ) :– ಮಾನ್ಯ ಕಂದಾಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಅಫಜಲ್‌ಪುರ ನಗರದಲ್ಲಿ ಇರುವ ಇನಾಮಿ ಜಮೀನುಗಳು ಎಷ್ಟು? (ವಿವರ ಒದಗಿಸುವುದು)

(ಆ) ಈ ಇನಾಮಿ ಜಮೀನಿನಲ್ಲಿ ಸರ್ಕಾರದ ಉಪಯೋಗಕ್ಕಾಗಿ ತಹಸೀಲ್ದಾರ್ ಕಛೇರಿ, ಹೈಸ್ಕೂಲ್ ಮತ್ತು ಬಸ್ ನಿಲ್ದಾಣಕ್ಕಾಗಿ ಸಾದರಪಡಿಸಿಕೊಂಡ ಜಮೀನು ಎಷ್ಟು?

(ಇ) ಕಟ್ಟಡಗಳ ಆವರಣದಲ್ಲಿ ಅನಧಿಕೃತ ಶೆಡ್‌ಗಳು ನಿರ್ಮಾಣವಾಗಿದ್ದು, ಇವುಗಳನ್ನು ಕಿತ್ತೊಗೆಯುವ ಕೆಲಸವನ್ನು ಸರಕಾರ ಕೈಗೊಂಡಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

(ಅ) ಅಫಜಲ್‌ಪುರ ನಗರದಲ್ಲಿ ಒಟ್ಟು 2177 ಎಕರೆ 29 ಗುಂಟೆ ಇನಾಂ ಜಮೀನು ವಿವರ ಕೆಳಕಂಡಂತಿದೆ.

ಕ್ರ.ಸಂ	ಇನಾಂ ಹೆಸರು	ವಿಸ್ತೀರ್ಣ, ಗುಂಟೆ
1	ಭತ್ ಇನಾಂ	27–00
2	ಧನಗರ ಇನಾಂ	08–36
3	ಸಾಲಿ ಇನಾಂ	19–32
4	ಚೌಥಾಯಿ ಇನಾಂ	20–18
5	ಚೌಥಾಯಿ ಇನಾಂ	64–31
6	ಚೌಥಾಯಿ ಇನಾಂ	32–16
7	ಚೌಥಾಯಿ ಇನಾಂ	47–18
8	ಚೌಥಾಯಿ ಇನಾಂ	36–24
9	ನಿಷ್ಟ ಇನಾಂ	20–24
10	ಚೌಥಾಯಿ ಇನಾಂ	31–05
11	ನಿಷ್ಟ ಇನಾಂ	14–22
12	ಸಮಸ್ತ ಹರಿಜನ	138–24
13	ಮುಕ್ತಮ್ ಅಫಜಲ ರಹಿಮ ಅಫಜಲ ಸಾತಚಾಬರ ಇನಾಂದಾರ	1041–36
14	ಜಪ್ತಿ ಇನಾಂ	50–28
15	ಮುಲ್ಲಾ ಇನಾಂ	32–17
16	ಜೂಡಿ ಇನಾಂ	50–28
17	ಖಾಜಿ ಇನಾಂ	229–05

18	ಮುಜಾವರ ಇನಾಂ	102–07
19	ಫಕೀರ್ ಇನಾಂ	54–00
20	ಚಾಥಾಯಿ ಇನಾಂ	53–26
21	ಗುರುನಾಥ್ ಅಪ್ಪಯ್ಯ ಹರಿದಾಸ	81–00
22	ತಿಜಾಯಿ ಇನಾಂ	19–32
	ಒಟ್ಟು	**2177–29**

(ಆ) ಈ ಇನಾಂ ಜಮೀನುಗಳಲ್ಲಿ

1) ಬಸ್ ನಿಲ್ದಾಣಕ್ಕೆ ಸರ್ವೇ ನಂ3ರಲ್ಲಿ 2–00 ಎಕರೆ

2) ಪ್ರೌಢ ಶಾಲೆಗೆ ಸರ್ವೇ ನಂ 3 ರಲ್ಲಿ 2–10 ಎಕರೆ.

3) ತಹಸೀಲ್ದಾರ್ ಕಾರ್ಯಾಲಯಕ್ಕೆ ಸರ್ವೇ ನಂ 3 ರಲ್ಲಿ 00.30 ಗುಂಟೆ,

4) ಸರ್ವೇ ನಂ 4 ರಲ್ಲಿ 2–20 ಎಕರೆ ಜಮೀನು, ಹೀಗೆ ಒಟ್ಟು 7 ಎಕರೆ–20 ಗುಂಟೆ ಜಮೀನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

(ಇ) ಈ ಕಟ್ಟಡಗಳ ಆವರಣಗಳಲ್ಲಿ ಯಾವುದೇ ಅನಧಿಕೃತ ಶೆಡ್‌ಗಳು ನಿರ್ಮಾಣವಾಗಿರುವುದಿಲ್ಲ.

ರೇಷ್ಮೆ ಗೂಡು ಮಾರುಕಟ್ಟೆಯಲ್ಲಿನ ಭ್ರಷ್ಟಾಚಾರ

416. ಶ್ರೀ ವಿ. ಸೋಮಣ್ಣ :– ಮಾನ್ಯ ರೇಷ್ಮೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ರೇಷ್ಮೆ ಗೂಡು ಮಾರುಕಟ್ಟೆಗಳ ಸಂಖ್ಯೆ ಎಷ್ಟು;

(ಆ) ಈ ಮಾರುಕಟ್ಟೆಗಳಲ್ಲಿ ತೂಕ ಮತ್ತು ಅಳತೆ, ಹರಾಜು ಕೂಗುವುದರಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಇದರಿಂದ ರೈತರಿಗೆ ನಷ್ಟವಾಗುವುದಿಲ್ಲವೇ;

(ಈ) ಇದನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಶಿವಣ್ಣ (ಮಾನ್ಯ ರೇಷ್ಮೆ ಸಚಿವರು)

(ಅ) ರಾಜ್ಯದಲ್ಲಿ 66 ರೇಷ್ಮೆ ಗೂಡು ಮಾರುಕಟ್ಟೆಗಳನ್ನು ಸ್ಥಾಪಿಸಿದ್ದು, ಅದರಲ್ಲಿ 53 ಮಾರುಕಟ್ಟೆಗಳಲ್ಲಿ ವಹಿವಾಟು ನಡೆಯುತ್ತಿದೆ.